# ಆಹಾ ಸುದ್ದಿ!

★ ಸಸಿತೋಟ



ಈತ ಬೀಜಿಂಗ್‌ನ ಮೈಕೆಲ್ ಜಾಕ್ಸನ್. ನಾಲ್ಕು ವರ್ಷಗಳ ಹಿಂದೆ ಪಾಪ್ ದೊರೆ ಮೈಕೆಲ್ ಜಾಕ್ಸನ್ ಮ್ಯೂಸಿಕ್ ವಿಡಿಯೋ ನೋಡಿದ ಝಾಂಗ್ ಎಂಬಾತ ನಂತರ ಆತನನ್ನೇ ಅನುಕರಿಸುತ್ತಿದ್ದಾನಂತೆ. ರಸ್ತೆ ಬದಿಯಲ್ಲಿ, ಸಣ್ಣ ಪುಟ್ಟ ಸಮಾರಂಭಗಳಲ್ಲಿ ಜಾಕ್ಸನ್ ಥರ ನರ್ತಿಸಿ ಹಣ ಸಂಪಾದಿಸುತ್ತಿದ್ದಾನೆ. ಜಾಕ್ಸನ್ ಕೂಡಾ ಬೀದಿಯಿಂದಲೇ ಬಂಗ್ಲೆಗೆ ಬಡ್ತಿ ಪಡೆದಿದ್ದು ಎಂದು ಡೈಲಾಗ್ ಕೂಡಾ ಹೊಡೆಯುತ್ತಾನಂತೆ.

ಕಳೆದ ಜುಲೈನಲ್ಲಿ ಬಾಹ್ಯಾಕಾಶಕ್ಕೆ ಹಲ್ಲಿಗಳನ್ನು ಮಧುಚಂದ್ರಕ್ಕೆಂದು ಕಳಿಸಿದ್ದ ರಷ್ಯಾ ವಿಜ್ಞಾನಿಗಳು ಹಲ್ಲಿಗಳ ಮರಿಗಳನ್ನು ಸ್ವಾಗತಿಸುವ ಬದಲು ಅವುಗಳ ಹೆಣಗಳನ್ನು ನೋಡಬೇಕಾಯಿತು. ಇದಕ್ಕೂ ಮುಂಚೆ ನೊಣಗಳನ್ನು ಕಳಿಸಿ ನಾಲ್ಕು ತಲೆಮಾರುಗಳ ನೊಣಗಳನ್ನು ವಾಪಸ್ಸು ಭೂಮಿಗೆ ಕರೆಸಿದ್ದ ವಿಜ್ಞಾನಿಗಳು ಈ ಬಾರಿ ಏನಾಯ್ತೋ ಎಂದು ತಲೆ ಕೆಡಿಸಿಕೊಳ್ಳುತ್ತಿದ್ದಾರೆ. ಹಲ್ಲಿಗಳು ಲವ್ ಬದಲು ವಾರ್ ಶುರು ಮಾಡಿದ್ದು ಕಾರಣವಿರಬಹುದು.

ಜಪಾನಿನ ಈ ಅತ್ಯಂತ ಹಿರಿಯ ಅಥ್ಲೀಟ್ 103 ವರ್ಷದ ಮಿಯಾಸಾಕಿ ಹಿರಿಯರ ಒಂದು ನೂರು ಮೀಟರ್ ಓಟದಲ್ಲಿ ವಿಶ್ವ ದಾಖಲೆ ಮಾಡಿದ್ದಾನಂತೆ. ತನ್ನ ಕನಸಿನ ರೇಸ್‌ಗಾಗಿ ಇನ್ನೂ ಐದು ವರ್ಷಗಳವರೆಗೆ ಕಾಯುವುದಾಗಿ ಹೇಳಿಕೊಂಡಿರುವ ಮಿಯಾಸಾಕಿ ಆರೋಗ್ಯದ ಗುಟ್ಟು ಆತನ ಮಗಳು ಮಾಡುವ ಕಿತ್ತಳೆ ಹಣ್ಣಿನ ಜ್ಯಾಮ್ ಅಂತೆ. ಈ ಜ್ಯಾಮ್‌ಗೆ ಈಗಾಗಲೇ ಬೇಡಿಕೆ ಶುರುವಾಗಿರಬಹುದು, ಶತಕ ದಾಟಿದವರಿಂದ.







ನ್ಯೂಯಾರ್ಕ್‌ನ ಕ್ರಿಸ್ ಕಳೆದ ಕೆಲವು ವರ್ಷಗಳಿಂದ ಈ ಜೋಡಿ ಆಮೆಗಳನ್ನು ಸಾಕಿಕೊಂಡಿದ್ದಾನೆ. ಈತನ ಆಮೆ ಪ್ರೀತಿ ಎಷ್ಟಿದೆಯೆಂದರೆ ಬೆರಳಿಗೆ ಲಕ್ಷಾಂತರ ಡಾಲರ್ ಬೆಲೆಬಾಳುವ ಅಮೂಲ್ಯ ಹರಳಿನ ಉಂಗುರ ಮಾಡಿಸಿಕೊಂಡಿದ್ದಾನಂತೆ. ನಿತ್ಯ ಬೀದಿ ಬದಿಯಲ್ಲಿ ವಾಕ್ ಮಾಡಿಸುತ್ತಾನೆ. ಆಮೆಗಳೇನೋ ವೇಗದ ನಡಿಗೆ ಮಾಡಿ ಬೆವರಿಳಿಸುತ್ತವೆ. ಆದರೆ ಕ್ರಿಸ್ ನಿಧಾನ ನಡಿಗೆಯಲ್ಲಿ ಪ್ರಾವೀಣ್ಯತೆ ಸಾಧಿಸಿರಬಹುದು.



ಜಪಾನಿನ ಚಿಬಾದ ಈ ವ್ಯಕ್ತಿ ಚಿಬ್ಯಾಟ್‌ಮ್ಯಾನ್ ಎಂದು ಹೆಸರಿಟ್ಟುಕೊಂಡು ಬ್ಯಾಟ್‌ಪಾಡ್ ಎಂಬ ತ್ರಿಚಕ್ರ ವಾಹನದ ಮೇಲೆ ಬೀದಿ ಸುತ್ತುತ್ತಾನಂತೆ. ಬ್ಯಾಟ್‌ಮ್ಯಾನ್ ಸಿನಿಮಾ 'ದಿ ಡಾರ್ಕ್ ನೈಟ್' ನಿಂದ ಸ್ಫೂರ್ತಿ ಪಡೆದು ಈ ರೀತಿ ದಿರಿಸು ಹಾಕಿಕೊಂಡು ಅಡ್ಡಾಡುತ್ತಾನಂತೆ. ಆದರೆ ಆತನಂತೆ ಅಪರಾಧಿಗಳ ವಿರುದ್ಧ ಹೋರಾಡದೆ ಹೆಂಗಳೆಯರು ಕಂಡರೆ ಒಂದು ಮುಗುಳ್ನಗು ಹಾರಿಸುತ್ತಾನಂತೆ. ನಗುವಿಗೇ ಸೀಮಿತವಾದರೆ ಪರವಾಗಿಲ್ಲ, ಇಲ್ಲದಿದ್ದರೆ ಬ್ಯಾಟ್‌ಮ್ಯಾನ್ ಮಣಿಸಲು ಬ್ಯಾಟ್‌ವುಮನ್ ಬರಬೇಕಾಗಬಹುದು.

ಉದ್ಯೋಗದಲ್ಲಿ ಹಂತಗಳನ್ನೇರುವುದು ನಿಮ್ಮ ಬ್ಯಾಂಕ್ ಬ್ಯಾಲನ್ಸ್‌ಗೆ ಒಳ್ಳೆಯದಿರಬಹುದು, ಆದರೆ ತಲೆ ಕೂದಲಿಗಂತೂ ಅಲ್ಲ. ವಾರ್ಷಿಕ 75,000 ಪೌಂಡ್ (ಸುಮಾರು 73.73 ಲಕ್ಷ ರೂಪಾಯಿ) ಗಳಿಸುವವರ ತಲೆ ಕೂದಲು ಉದುರಿ ತೆಳ್ಳಗಾಗುತ್ತದೆ ಎಂದು ಬ್ರಿಟನ್ನಿನಲ್ಲಿ ನಡೆದ ಸಮೀಕ್ಷೆಯೊಂದು ಹೇಳಿದೆ. ಇದಕ್ಕೆ ಒತ್ತಡ ಕಾರಣವಂತೆ. ಹಣ ಬೇಕಾ ಅಥವಾ ಸೌಂದರ್ಯವಾ? ಆಯ್ಕೆ ನಿಮಗೆ ಬಿಟ್ಟಿದ್ದು.